# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **289** |
| **ಮಾನ್ಯ ಸದಸ್ಯರ ಹೆಸರು** | : | **ಶ್ರೀ ಭೀಮರಾವ್ ಬಸವರಾಜ್ ಪಾಟೀಲ್** |
| **ಉತ್ತರಿಸುವ ದಿನಾಂಕ** | : | **06.03.2025** |
| **ಉತ್ತರಿಸುವ ಸಚಿವರು** | : | **ಗೃಹ ಸಚಿವರು** |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಬೀದರ್ ಜಿಲ್ಲೆಯ ವ್ಯಾಪ್ತಿಯಲ್ಲಿ ಕಳೆದ 3-4 ತಿಂಗಳುಗಳಿಂದ ದರೋಡೆ, ಕಳ್ಳತನ, ಹತ್ಯೆ ಪ್ರಕರಣಗಳು ಅಧಿಕಗೊಳ್ಳುತ್ತಿದ್ದು, ಇದರಿಂದ ಸಾರ್ವಜನಿಕರು ಭಯ ಭೀತಿಯಲ್ಲಿ ಓಡಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ಪ್ರಕರಣಗಳ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು; (ವಿವರ ನೀಡುವುದು)</td><td>ಬೀದರ ಜಿಲ್ಲೆಯಲ್ಲಿ ಕಳೆದ ನಾಲ್ಕು ತಿಂಗಳಲ್ಲಿ (01.11.2024 ರಿಂದ 28.02.2025 ರವರೆಗೆ) ವರದಿಯಾದ ದರೋಡೆ, ಕಳ್ಳತನ ಮತ್ತು ಹತ್ಯೆ ಪ್ರಕರಣಗಳ ವಿರುದ್ಧ ಪ್ರಕರಣಗಳನ್ನು ದಾಖಲಿಸಲಾಗಿದೆ. ಪ್ರಕರಣಗಳ ಅಂಕಿ-ಅಂಶಗಳ ಮಾಹಿತಿಯು ಕೆಳಕಂಡಂತಿದೆ.<br><br><table><tr><th>ಕ್ರಸ</th><th>ಅಪರಾಧ</th><th>ದಾಖಲಾದ ಪ್ರಕರಣಗಳ ಸಂಖ್ಯೆ</th></tr><tr><td>1</td><td>ದರೋಡೆ</td><td>01</td></tr><tr><td>2</td><td>ಕಳ್ಳತನ</td><td>124</td></tr><tr><td>3</td><td>ಹತ್ಯೆ</td><td>10</td></tr></table></td></tr>
<tr><td>ಆ</td><td>ಸದರಿ ಜಿಲ್ಲೆಯಲ್ಲಿ ಇಲ್ಲಿಯವರೆಗೆ ಎಷ್ಟು ಜನರನ್ನು ಬಂಧಿಸಿದ ಪ್ರಕರಣ ದಾಖಲಿಸಲಾಗಿದೆ ಹಾಗೂ ಇವರುಗಳ ಮೇಲೆ ಕೈಗೊಂಡ ಕ್ರಮವೇನು? (ಮಾಹಿತಿ ನೀಡುವುದು)</td><td>ಸದರಿ ಪ್ರಕರಣಗಳಲ್ಲಿ ಬಂಧಿಸಿದ ಆರೋಪಿಗಳ ಮಾಹಿತಿ ಕೆಳಕಂಡಂತಿದೆ.<br><br><table><tr><th>ಕ್ರಸ</th><th>ಅಪರಾಧ</th><th>ದಾಖಲಾದ ಪ್ರಕರಣಗಳ ಸಂಖ್ಯೆ</th></tr><tr><td>1</td><td>ದರೋಡೆ</td><td>03</td></tr><tr><td>2</td><td>ಕಳ್ಳತನ</td><td>24</td></tr><tr><td>3</td><td>ಹತ್ಯೆ</td><td>23</td></tr></table></td></tr>
</table>

| | | |
|---|---|---|
| | | **ಪೊಲೀಸ್ ಇಲಾಖೆ ಕೈಗೊಂಡ ಕ್ರಮ ಕೆಳಕಂಡಂತಿದೆ.**<br><br>❖ ಬೀದರ್ ಜಿಲ್ಲೆಯಲ್ಲಿ ಅಪರಾಧ ಪ್ರಕರಣಗಳಲ್ಲಿ ಇಳಿಮುಖವಾಗಿದ್ದು ಪ್ರಸ್ತುತ ಅವಧಿಯಲ್ಲಿ ವರದಿಯಾದ ಪ್ರಕರಣ ಪತ್ತೆ ಕಾರ್ಯ ಜಾರಿಯಲ್ಲಿದ್ದು, ಉಳಿದ ಪ್ರಕರಣಗಳನ್ನು ಆದಷ್ಟು ಬೇಗ ಪತ್ತೆ ಮಾಡುವ ಕುರಿತು ಕ್ರಮ ವಹಿಸಲಾಗುತ್ತಿದೆ.<br><br>❖ ಸ್ವತ್ತಿನ ಅಪರಾಧ ಪ್ರಕರಣಗಳನ್ನು ತಡೆಗಟ್ಟಲು ರಾತ್ರಿ ಮತ್ತು ಹಗಲು ಗಸ್ತು ಚುರುಕುಗೊಳಿಸಲಾಗಿದೆ. ಫುಟ್ ಪೆಟ್ರೋಲಿಂಗ್ ಮತ್ತು ಆಯುಧಗಳೊಂದಿಗೆ ಪೆಟ್ರೋಲಿಂಗ್ ಹೆಚ್ಚಿಸಲಾಗಿದೆ.<br><br>❖ ವರದಿಯಾದ ಸ್ವತ್ತಿನ ಅಪರಾಧ ಪ್ರಕರಣಗಳಲ್ಲಿ ಪ್ರಕರಣ ವರದಿಯಾದ ತಕ್ಷಣದಲ್ಲಿ ಠಾಣಾಧಿಕಾರಿಯವರಿಗೆ ಕೂಡಲೇ ಘಟನೆ ಸ್ಥಳಕ್ಕೆ ಭೇಟಿ ನೀಡಿ ಪ್ರಾಥಮಿಕ ತನಿಖೆ ಕೈಗೊಂಡು ಅಲ್ಲಿ ಸಿಗಬಹುದಾದ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಿ ಪ್ರಕರಣ ಭೇಧಿಸಲು ಸೂಚನೆ ನೀಡಲಾಗಿದೆ.<br><br>❖ ಸಿ.ಸಿ.ಟಿವಿ ಸರ್ವೈಲೆನ್ಸ್ ಮೂಲಕ ಅಪರಾಧ ಪ್ರಕರಣಗಳ ಪತ್ತೆ ಕಾರ್ಯ ಮಾಡಲಾಗುತ್ತಿದೆ. |

ಸಂಖ್ಯೆ: ಹೆಚ್‌ಡಿ 04 ಪಿಸಿಕ್ಯೂ 2025

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು